23.	ಸೋನಿಬಾಯಿ ಸೂರ್ಯ	"	ಮನೆ ಪ್ರಗತಿಯಲ್ಲಿದೆ	"
24.	ಭೀಮವ್ವಾ ಹಣಮಂತ	"	"	"
25.	ಭಾಗಮ್ಮ ಮರವ್ವಾ	ಹಣ್ಣೆಕೇರಾ	"	"
26.	ದೊಡ್ಡವ್ವಾ ಸಾಬಣ್ಣ	"	"	"
27.	ಧಾವರು ಧಾನ್ಯಾ	"	"	"
28.	ತೋಟಯ್ಯಾ ಶರಣಯ್ಯಾ	ಆಲಹಳ್ಳಿ	ಪೂರ್ಣಗೊಂಡಿದೆ	ಮನೆಯಲ್ಲಿ ವಾಸವಾಗಿದ್ದಾರೆ
29.	ಮೌಲಾನಶಾಹಾ ಸುಲೇಮಾನಶಾಹಾ	ಆಲಹಳ್ಳಿ	ಮನೆ ಪ್ರಗತಿಯಲ್ಲಿದೆ	-
30.	ಅಕಬರಅಲಿ ಆರಸಾಬ	ಆಲಹಳ್ಳಿ	ಪೂರ್ಣಗೊಂಡಿದೆ	ಮನೆಯಲ್ಲಿ ವಾಸವಾಗಿದ್ದಾರೆ
31.	ಶರಣಯ್ಯಾ ಚೆನ್ನಬಸಯ್ಯಾ	ಆಲಹಳ್ಳಿ	ಮನೆ ಪ್ರಗತಿಯಲ್ಲಿದೆ	-
32.	ಈರಣ್ಣಾ ಶರಣಪ್ಪಾ	ಸಂಕನೂರ	"	-
33.	ಶಿವಪ್ಪಾ ಶರಣಪ್ಪಾ	"	"	-
34.	ಮಹಾದೇವಪ್ಪಾ ರಾಮಣ್ಣಾ	ದಂಡಗುಂಡ	"	-
35.	ಮೌಲಾಬಿ ಇಮಾಮಸಾಬ	ರಾಮತೀರ್ಥ	"	-
36.	ಭೀಮರಾಯ ರಂಗಪ್ಪಾ	"	"	-
37.	ಮಹಾದೇವ ಮಲ್ಲಪ್ಪಾ	ರಾಜೋಳಾ	ಪೂರ್ಣಗೊಂಡಿದೆ	ಮನೆಯಲ್ಲಿ ವಾಸವಾಗಿದ್ದಾರೆ.
38.	ದುರಗಮ್ಮಾ ಭೀಮಣ್ಣಾ	ಅಲೂರು (ಕ)	ಮನೆ ಪ್ರಗತಿಯಲ್ಲಿದೆ	

ಬೆಂಗಳೂರು ಜಯನಗರದ ಬಳಿಯಿರುವ ವಿಜಯ ಪ್ರೌಢಶಾಲೆ ಬಳಿ ಸಂಚಾರಿ ಪೋಲೀಸ್ ವ್ಯವಸ್ಥೆ

645 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳಿನರಸೀಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಸೌತ್‌ಎಂಡ್ ವೃತ್ತದ ಬಳಿ ಇರುವ ವಿಜಯ ಪ್ರೌಢ ಶಾಲೆಯಲ್ಲಿ 2 ಸಾವಿರಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು ರಸ್ತೆ ದಾಟಲು ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಂಗಳೂರಿನ ಸೋಫಿಯಾ ಶಾಲೆ, ಬಿಷಪ್ ಕಾಟನ್ ಶಾಲೆ ಮುಂತಾದ ಶಾಲೆಗಳ ಮುಂದೆ ಶಾಲೆ ಪ್ರಾರಂಭವಾಗುವ ವೇಳೆ ಹಾಗೂ ಬಿಡುಗಡೆಯಲ್ಲಿ ಸಂಚಾರಿ ಪೋಲೀಸರನ್ನು ನಿಯೋಜಿಸಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ, ಕೂಡಲೇ ವಿಜಯ ಪ್ರೌಢಶಾಲೆ ಬಳಿ ಬೆಳಿಗ್ಗೆ 10 ಗಂಟೆಯಿಂದ ಹಾಗೂ ಸಂಜೆ 5 ಗಂಟೆಯಿಂದ ಒಂದು ಗಂಟೆ ವೇಳೆ ಸಂಚಾರಿ ಪೋಲೀಸ್ ವ್ಯವಸ್ಥೆಯನ್ನು ಹಾಕಿ ಶಾಲಾ ಮಕ್ಕಳು ರಸ್ತೆ ದಾಟಲು ಅನುಕೂಲ ಕಲ್ಪಿಸಲಾಗುವುದೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಇಲ್ಲ

ಆ) ಹೌದು

ಇ) ಬೆಂಗಳೂರು ನಗರ ಸಂಚಾರಿ ಪೋಲೀಸರ ಸಂಖ್ಯೆ ಕಡಿಮೆ ಇದ್ದುಸಂಚಾರ ಸಮಸ್ಯೆಗಳು ಅಧಿಕವಾಗಿರುವುದರಿಂದ ಇಂತಹ ಶಾಲೆಗಳ ಬಳಿ ಹಿರಿಯ ವಿದ್ಯಾರ್ಥಿಗಳಿಗೆ ಪೋಲೀಸರು ಸಂಚಾರ ನಿಯಂತ್ರಣದ ತರಬೇತಿ ನೀಡುತ್ತಿದ್ದು, ಅವರುಗಳು ಅದೇ ಶಾಲೆಗಳ ಬಳಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಸಂಚಾರಿ ಪೋಲೀಸರ ಸಂಖ್ಯೆ

ಉತ್ತಮಗೊಂಡಾಗ ಈ ಶಾಲೆಯ ಬಳಿ ಪೋಲೀಸರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಭವಿಸುತ್ತಿರುವ ಅಪಘಾತಗಳು

355 - ಶ್ರೀ ಗುರುಪಾದಪ್ಪ ನಾಗಾರ್ಜಪಳ್ಳಿ (ಜೀರಾದ್) : ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತಗಳ ಸಂಖ್ಯೆ ಎಷ್ಟು?

ಆ) ಇದರಿಂದ ಎಷ್ಟು ಸಾವು-ನೋವುಗಳು ಸಂಭವಿಸಿವೆ?

ಇ) ದೇಶದ ಇತರ ರಾಜ್ಯಗಳನ್ನು ಹೋಲಿಸಿದರೆ ಅಪಘಾತಗಳಲ್ಲಿ ರಾಜ್ಯ ಯಾವ ಸ್ಥಾನದಲ್ಲಿದೆ?

ಈ) ಇತ್ತೀಚಿನ ದಿನಗಳಲ್ಲಿ ಬೆಂಗಳೂರು-ತುಮಕೂರು ರಸ್ತೆಯಲ್ಲಿ ಸರಣಿ ಅಪಘಾತಗಳು ಸಂಭವಿಸುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

ಉ) ರಸ್ತೆ ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಊ) ರಸ್ತೆ ಅಪಘಾತಗಳಲ್ಲಿ ಸಿಲುಕಿದವರಿಗೆ ತುರ್ತು ಚಿಕಿತ್ಸೆ ನೀಡಲು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಯಾವ ರೀತಿಯಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ)

ವರ್ಷ	ಅಪಘಾತಗಳ ಸಂಖ್ಯೆ
1992	6736
1993	6974

ಆ)

	ಮೃತಪಟ್ಟವರು	ಗಾಯಾಳುಗಳು
1992	1542	7991
1993	1586	7769

ಇ) ಅಪಘಾತಗಳ ಪ್ರಮಾಣ ಕಡಿಮೆ ಇದೆ.

ಈ) ಹೌದು

ಉ) ರಸ್ತೆ ಅಪಘಾತಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ

1) ಅತಿ ವೇಗದ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ.

2) ಪಾನಮತ್ತ ಚಾಲಕರನ್ನು ಪತ್ತೆ ಮಾಡಲಾಗುತ್ತಿದೆ.

3) ಅಧಿಕ ಭಾರ ಸರಕುಗಳನ್ನು ಸಾಗಿಸುವ ವಾಹನಗಳನ್ನು ಪತ್ತೆಹಚ್ಚಲಾಗುತ್ತಿದೆ.

4) ರಸ್ತೆಯ ಬದಿಯಲ್ಲಿ ವಾಹನಗಳನ್ನು ನಿಲ್ಲಿಸದಂತೆ ತಡೆಗಟ್ಟಲಾಗುತ್ತಿದೆ.

5) ನಿಧಾನ ಮತ್ತು ವೇಗವಾಗಿ ಚಲಿಸುವ ವಾಹನಗಳಿಗೆ ಪ್ರತ್ಯೇಕವಾಗಿ ಸಂಚಾರ ವ್ಯವಸ್ಥೆ ಮಾಡಲಾಗಿದೆ.

6) ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗಸ್ತು ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ.

7) ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಕ್ಕೊಳಗಾಗಿ ಅಥವಾ ಬ್ರೇಕ್ ವೈಫಲ್ಯದಿಂದ ರಸ್ತೆಯ ಮಧ್ಯದಲ್ಲಿಯೇ ನಿಲ್ಲುವ ವಾಹನಗಳನ್ನು ತೆಗೆಯುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಜಿಲ್ಲೆಗಳಿಗೆ ಕ್ರೇಕರ್ಸ್ ಒದಗಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.